ಮದ್ದಗಿರಿ ಸಬ್ ಡಿವಿಜ್ ಮುನಸಿಫ್ ಕೋರ್ಟಿನಿಂದ.

ಸ್ ೧೮೯೪—೯೫ನೇ ಇಸವಿ ಸಿವಿಲ್ ಒರಿಜನಲ್ ನಂಬರ್ 418.

ಮನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವೈರ್, ಬಿ. ಎ. ಬಿ. ಎಲ್. ಯವರ ರೂಬರೂಬ್.

ವಾದಿಗಳು.	ಪ್ರತಿವಾದಿ.
೧ರಾ ಕಸಬಾದಲ್ಲಿರುವರು 1ನೇ ಅಕ್ಕ ಬರ್‌ಸಾಬಿ. 2ನೇ ಇಮಾಮು ಮೊಹದ್ದಿಸಾಬಿ. 3ನೇ ಉಸುಮ್ಮಾನ್‌ಸಾಬಿ. 4ನೇ ಅಕ್ಕ ಬರ್‌ಖಾ. 5ನೇ ಹೈದರ್‌ಸಾಬಿ.	೧ರಾದಲ್ಲಿರುವ ರಾಜಾಅಹಮದ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ೧ರಾ ತಾಲ್ಲೂಕು ೧ರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲ್ಕು, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಪೈರೋಡ್ ಈ ಮಧ್ಯೆ ಇರುವ ನಿವೇಶನವಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾಮು ಪಂಜಾ ಕೂಡಿಸುವ ಆಷರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (b) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (c) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದ್ದೆಂತಲೂ (d) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನ್ನವಾಗಿ ಸದರೀ ಪಂಜಾ ಕೂಡಿಸಲು ವಾದಿಗಳು ಅರುಹರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಕೇರಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮೆ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗ ತಕ್ಕದ್ದಿದೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನಸಿಫ್.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸ್ ೧೮೯೬ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೆರಂಬಾಡಿ ಮತ್ತು ಖಂಡಿಪುರದ ಜಂಗಲ್‌ಗಳಲ್ಲಿ ವಣ ಚೌಬೀನೆಯನ್ನು ಖರೀದಿಗೆ ಪಡಿಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡಿಯಾರ್ಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲೈ ಛಾರ್ಜ್ ಜಾತಾ ಬಿಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಪ್ಶೀಲ್ ತಿಳಿಯಬೇಕೆಂದು ಕುತೂಹಲ ವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಕಡೂರು ಡಿಸ್ಟ್ರಿಕ್ಟು.
ಕೊಪ್ಪ ತಾಲ್ಲೂಕು.
ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸ್ ೧೮೯೬ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಬೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ ೧೮೯೬ನೇ ಇಸವಿ ಡಿಸೆಂಬರ್

ತಾರೀಖು 7ನೇ ಸೋಮವಾರ ಹಗಲು 11 ಘಂಟೆಗೆ ಕಡೂರು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜರ್ಮಿ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜರ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆಹನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್) ಪೈಕಿ ಯಾ ಚಿವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರ ವ್ಯಾರಾದರೂ ಪಡೆದರೆ ದರಖಾಸ್ತುದಾರನ ಷರೂ ಶೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡದೆ ತಪ್ಪಿದರೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಶೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರತಕ್ಕದ್ದು. ಮತ್ತು ಸ್ವತ್ತು ಪುನಹ ವಿಕ್ರಯಿಸಲ್ಪಡುವ ಮನುಷ್ಯನ ಸ್ವತ್ತಿಗೆ ಇದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಮೊಬಲಗಿನ ಯಾವ ಭಾಗದ ಹಕ್ಕು ಇಲ್ಲದವನಾಗಿ ಇರುತ್ತಾನೆ. ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಇದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯೂಟಿ ಕಮ್ಮಿಷನರಿಗೆ ತೋರಿ ಬಂದರೆ ಅಂಥಾವುಗಳನ್ನು ಸರಕಾರದ ಆರ್ಡರುಬಗ್ಯೆ ಕ್ಲಿಯರನ್ಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ. ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಳಲು ಮೊದಲು ಹರಾಜಿನಲ್ಲಿ ಚಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಇಂಥಾ ವ್ಯತ್ಯಾಸದ ಮೊಬಲಗನ್ನು ಡೆಪ್ಯೂಟಿ ಕಮ್ಮಿಷನರವರು ಜರ್ಮಿ ಕಂದಾಯದ ಬಾಕಿಯಂತೆ ವಸೂಲ್ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷರು ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜರ್ಮಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜರ್ಮಿ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ವಿಸ್ತೀರ್ಣ.	ಆಕಾರ.	
112ರ ಪೈ.	ಕೊಪ್ಪಡಿ ಯಸ್ಟೇಟ್ ಮೆನೆಜರ್ ಹೆ ಸಾಹೆ ಬರವರು.	ಪೈಕಿಣಮನೆಪ್ಪು, ಹಾಳ್ಬೆಗುಂದ ಹೋಬ್ಳಿ ಜ್ಯೂರೇದೇವರು ಗ್ರಾಮ.	1 ಪೂರ್ವ—ದೇವಗಣಹಳ್ಳಿ ಬಿಜಪಟ್ಟೆ ಕೊಂಡಾ ಸರ್ಕಾರ ಇರುವ ನಂಬರ ಗಡಿ. 2 ಪಡಿಮೆಣಹಳ್ಳಿ—ಹೊಳ್ಳ. 3 ದಕ್ಷಿಣ—ನಂ. 111ನೇ ಖರಾರಗುಡ್ಡೆ 4 ಉತ್ತರ—ಹೊಳ್ಳ.	62—2	..	

ತಿಳುವಳಿಕೆ ಷರಾ.—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬರೆದು ಕಬ್ಜಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರು ವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೆ ಆಗಲಿ ಜರ್ಮಿ ಹಿಡುವಳಿದಾರನು ಬದ್ಧವಾಗಿ ಅರ್ಹನಾಗಿರಬೇಕು.

ಹೆಚ್. ಹೆಚ್. ಸ್ವಾರ್ಟ್ಸ್,
ಡೆಪ್ಯೂಟಿ ಕಮ್ಮಿಷನರ್.

Mysore Govt. Central Press, Bangalore.—1896.